

ಹಿಗ್ಸ್–ಬೋಸಾನ್

ತಿಳಿದುಕೊಂಡ ನಂತರ ವಿಜ್ಞಾನಾಸಕ್ತರು ಅಧ್ಯಯನವನ್ನು ಮುಂದುವರಿಸಿದ್ದಾರೆ, ದೈವಾಸಕ್ತರು 'ಇದರ ಗೊಡವೆ ನಮಗೇಕೆ?' ಎಂದು ಸುಮ್ಮನಾಗಿದ್ದಾರೆ. ಆದರೆ, ಅರೆಬರೆ ವಿಜ್ಞಾನದ ಪಾರಿಭಾಷಿಕ ಪದಗಳನ್ನು ಬಳಸಿ ಮುಗ್ಧ ಜನರನ್ನು ಮರುಳು ಮಾಡುವ ಕಪಟಿಗಳು ಮಾತ್ರ ಈಗಲೂ ಇದನ್ನು ಭಾರತೀಯ ಭಾಷೆಗಳಲ್ಲಿ ದೇವಕಣ ಎಂದೇ ಕರೆದು, ಇದು ವಿಶ್ವದಲ್ಲಿ ದೇವರು ತನ್ನ ಅಸ್ತಿತ್ವವನ್ನು ಸಾರಲು ಇರಿಸಿರುವ ರುಜುವಾತು ಎಂದೇ ಬುರುಡೆ ಬಿಡುತ್ತಾರೆ.

## ಹಿಗ್ಸ್ ಬೋಸಾನ್ ಎಂದರೇನು?

ನೀರಿನಿಂದ ಹಿಡಿದು ನಾರಿನವರೆಗೆ, ವಾನರನಿಂದ ಹಿಡಿದು ನರನವರೆಗೆ, ನಿಮ್ಮಿಂದ ಹಿಡಿದು ನೀವು ಕುಳಿತಿರುವ ಕುರ್ಚಿ, ತಿನ್ನುವ ಇಡ್ಲಿ, ಕುಡಿಯುವ ಕಾಫಿ, ಮಲಗುವ ಹಾಸಿಗೆ, ಗ್ರಹ, ನಕ್ಷತ್ರ, ಗ್ಯಾಲಕ್ಸಿ ಇತ್ಯಾದಿ ವಿಶ್ವದಲ್ಲಿ ಅಸ್ತಿತ್ವದಲ್ಲಿರುವ ಎಲ್ಲವೂ ಕೆಲವು ಮೂಲಭೂಲ ಕಣಗಳಿಂದ ಆಗಿವೆ. ನಮ್ಮ ಸುತ್ತಮುತ್ತಲ ಜಗತ್ತನ್ನು ಕಣ್ಣಿಗೆ ಕಾಣುವ ದ್ರವ್ಯದ ಹಲವಾರು ರೂಪಗಳಲ್ಲಿ ವಿಜ್ಞಾನದ ಹಲವು ಶಾಖೆಗಳು ವಿವರಿಸುತ್ತವೆ. ಆದರೆ, ಸಂಕೀರ್ಣವಾದ ವಿಶ್ವವನ್ನು ಅದರ ಅತ್ಯಂತ ಮೂಲಭೂತ ರಚನಾ ಘಟಕಗಳ ಮಟ್ಟಕ್ಕೆ ಇಳಿಸಿ ಅರ್ಥ ಮಾಡಿಕೊಳ್ಳುವ ಒಂದು ಪ್ರಯತ್ನ ಪಾರ್ಟಿಕಲ್ ಫಿಸಿಕ್ಸ್, ಕಣ ಭೌತವಿಜ್ಞಾನ. ಈ ನಿಟ್ಟಿನಲ್ಲಿ 1970ರಲ್ಲಿ ಅಭಿವೃದ್ಧಿ ಪಡಿಸಲಾದ ಸಿದ್ಧಾಂತವನ್ನು ವಿಶ್ವದ ಪ್ರಮಾಣಕ ಮಾದರಿ (standerd model) ಎಂದು ಕರೆಯಲಾಗುತ್ತದೆ. ವಿಶ್ವವು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಇದು ಕಣಭೌತವಿಜ್ಞಾನದ ಪರಿಭಾಷೆಯಲ್ಲಿ ವಿವರಿಸುತ್ತದೆ.

ಅದರ ಪ್ರಕಾರ, ವಿಶ್ವವು 12 ವಿವಿಧ ದ್ರವ್ಯ (matter) ಕಣಗಳು ಮತ್ತು ನಾಲ್ಕು ಬಲ (Force)ಗಳಿಂದ ಆಗಿದೆ. ಈ 12 ಕಣಗಳಲ್ಲಿ, ಆರು ಕ್ವಾರ್ಕ್‌ಗಳು ಮತ್ತು ಆರು ಲೆಪ್ಟಾನ್‌ಗಳಿವೆ. ಕ್ವಾರ್ಕ್‌ಗಳು ಎಂದರೆ ಪ್ರೋಟಾನ್ಸ್ ಮತ್ತು ನ್ಯೂಟ್ರಾನ್ಸ್ ಇತ್ಯಾದಿ ಮತ್ತು ಲೆಪ್ಟಾನ್‌ಗಳು ಎಂದರೆ ಇಲೆಕ್ಟ್ರಾನ್ ಮತ್ತು ಇಲೆಕ್ಟ್ರಾನ್ ನ್ಯುಟ್ರಿನೋ ಇತ್ಯಾದಿ. ವಿಜ್ಞಾನಿಗಳ ಪ್ರಕಾರ, ಈ